ಹೇಳಿ ನಾವು ಸಿಟಿಯ ಕಡೆ ಮುಖ ಮಾಡಿದ್ದೆವು. ಕೆ.ಎಮ್. ನಯ್ಯಾರರಿಗೆ ಮಾತನಾಡೋಣವೆಂದು ಫೋನ್ ಮಾಡಿದ್ದೆ. ಆ ಕಡೆ ಮನೋಹರ್ ಕುಂಜು ಫೋನ್ ರಿಸೀವ್ ಮಾಡಿಕೊಂಡು 'ಸಾರ್, ಗುಡ್ ಇವಿನಿಂಗ್, ನಯ್ಯಾರ್ ಸರ್ ಮೀಟಿಂಗ್‌ನಲ್ಲಿದ್ದಾರೆ. ಸೆಂಟ್ರಲ್ ಹೋಂ ಮಿನಿಸ್ಟರ್ ಮಧ್ಯಾಹ್ನ ಎರಡು ಗಂಟೆಯಿಂದ ವೈಮಾನಿಕ ಸಮೀಕ್ಷೆಯನ್ನು ಮಾಡಿ ಅರ್ಧ ಗಂಟೆಯಿಂದ ಮೀಟಿಂಗ್ ನಡೆಸ್ತಿದಾರೆ. ಚೀಫ್ ಮಿನಿಸ್ಟರ್, ಫಾರೆಸ್ಟ್ ಮಿನಿಸ್ಟರ್ ಮತ್ತು ಪಿಡಬ್ಲ್ಯುಡಿ ಮಿನಿಸ್ಟರ್ ಕೂಡಾ ಮೀಟಿಂಗ್‌ನಲ್ಲಿದ್ದಾರೆ. ಸೆಂಟ್ರಲ್ ಹೋಂ ಮಿನಿಸ್ಟರ್ ನಯ್ಯಾರ್ ಸರ್‌ರವರನ್ನು ಸಾರ್ವಜನಿಕ ಸಭೆಯಲ್ಲಿ ಕೊಂಡಾಡಿದ್ದರು. ಆದರೆ ಚೀಫ್ ಮಿನಿಸ್ಟರ್ ಮತ್ತು ಫಾರೆಸ್ಟ್ ಮಿನಿಸ್ಟರ್, ಕಾರ್ಮಿಕ ನಾಯಕ ನೆಲ್ಸನ್ನರ ಸಾವಿನಲ್ಲಿ ನಯ್ಯಾರರ ಕೈವಾಡವನ್ನು ತೆಗೆದುಹಾಕುವಂತಿಲ್ಲವೆಂದು, ಆ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂದು ಅದೇ ಸಾರ್ವಜನಿಕ ಸಭೆಯಲ್ಲಿ ಒತ್ತಾಯಿಸಿದ್ದರು. ಸರ್ ಒಂದಿಷ್ಟೂ ವಿಚಲಿತರಾಗದೆ 'ಧರ್ಮೋ ರಕ್ಷತಿ ರಕ್ಷಿತಃ' ಎಂದಷ್ಟೇ ಹೇಳಿದರು. ಆದರೆ ಪ್ರವಾಹದಲ್ಲಿ ನೆಲ್ಸನ್ ಕೊಚ್ಚಿ ಹೋಗಿ ಸತ್ತರೆ ಅದಕ್ಕೆ ಕೆ.ಎಮ್. ನಯ್ಯಾರ್ ಹೇಗೆ ಹೊಣೆಯಾಗುತ್ತಾರೆ ಎಂದು ಪಬ್ಲಿಕ್ ಒಪೀನಿಯನ್ ವ್ಯಾಪಕವಾಗಿ ಬಿಲ್ಡ್ ಆಗುತ್ತಿದೆ. ಫ್ಲಡ್ ರಿಲೀಫ್ ಕಾರ್ಯನಿರ್ವಹಿಸುವಲ್ಲಿ ಮುಖ್ಯ ಮಂತ್ರಿಗಳು ಟೋಟಲ್ ಫೇಲ್ಯೂರ್ ಆಗಿದ್ದಾರೆಂದು ಚಾನಲ್ ಮತ್ತು ಪತ್ರಿಕೆಗಳಲ್ಲಿ ವ್ಯಾಪಕವಾಗಿ ಸುದ್ದಿಯಾಗುತ್ತಿದೆ ಮತ್ತು ಚರ್ಚೆಯಾಗುತ್ತಿದೆ'. ಮನೋಹರ್ ಕುಂಜುವಿನ ಮಾತುಗಳಲ್ಲಿ ಉತ್ಸಾಹ ತುಂಬಿ ತುಳುಕುತ್ತಿತ್ತು. 'ಓಹ್, ಗುಡ್ ಪ್ರೊಗ್ರೆಸ್', ನಾನೂ ಖುಷಿಯನ್ನು ವ್ಯಕ್ತಪಡಿಸಿದ್ದೆ. 'ರಾತ್ರಿ ಒಂಬತ್ತು ಗಂಟೆಗೆ ಫೋನ್ ಮಾಡಿ, ಸಾರ್ ಬಿಡುವಾಗ್ತಾರೆ. ಯಾರದ್ದೋ ಬೇರೆ ಕಾಲ್ ಬರ್ತಿದೆ' ಎಂದು ಫೋನ್ ಕಟ್ ಮಾಡಿದ್ದ.

ಭಾಗ–16

ಮನೋಹರ್ ಕುಂಜು ಹೇಳಿದ ವಿಷಯವನ್ನು ರಾಘವರೆಡ್ಡಿಗೆ ಹೇಳಿ, 'ನಾನು ಕೇರಳದಿಂದ ಮೊನ್ನೆ ಫೋನ್ ಮಾಡಿದಾಗ ಸುಧೀಂದ್ರ ನಯ್ಯಾರ್ ಬಗ್ಗೆ ಖುದ್ದು ಭೇಟಿಯಾದಾಗ ಹೇಳ್ತೀನಿ ಅಂದಿದ್ರಿ' ಎಂದು ನೆನಪಿಸಿದ್ದೆ. ರಾಘವರೆಡ್ಡಿ, 'ನೆಲ್ಸನ್ ಮತ್ತು ಅಚ್ಯುತನ್ ನಂಬಿಯಾರ್ ಸಾವಿನಲ್ಲಿ ಸುಧೀಂದ್ರ ನಯ್ಯಾರ್ ಕೈವಾಡವಿರಬಹುದೆಂದು ನನ್ನ ಬಲವಾದ ಅನುಮಾನ. ಆತ ಎಷ್ಟು ಸಾಫ್ಟ್ ಮನುಷ್ಯನೋ ಅಷ್ಟೇ ಕ್ರೂಯಲ್ ಕೂಡಾ. ಮತ್ತು ಏನೇ ಯೋಚನೆ ಮಾಡಿದರೂ ಅತ್ಯಂತ ಡೆಪ್ತಾಗಿ ಮಾಡ್ತಾನೆ. ಯಾವುದೇ ವಿಷಯದಲ್ಲೂ ಅದರ ರೂಟ್ಸ್‌ಗೆ ಹೋಗಿ ಸಲ್ಯೂಶನ್ ಕಂಡುಕೊಳ್ತಾನೆ. ದಿನವೊಂದಕ್ಕೆ ಮೂರರಿಂದ ಮೂರೂವರೆ ಲಕ್ಷ ಖರ್ಚು ಬರುವ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್ ನಡೆಸುತ್ತಿದ್ದಾನೆಂದರೆ ಎಂಥ ಕೆಪಾಸಿಟಿ ಇರಬೇಕು. ನನಗೆ ತಿಳಿದಂತೆ ನೆಲ್ಸನ್ ಮತ್ತು ಅಚ್ಯುತನ್ ನಂಬಿಯಾರ್ ಇಬ್ಬರನ್ನೂ ಒಟ್ಟಿಗೆ ಬಲಿತೆಗೆದುಕೊಳ್ಳಲು ಸುಧೀಂದ್ರ ನಯ್ಯಾರ್ ಇತ್ತೀಚೆಗಂತೂ ತುಂಬಾ ಹವಣಿಸುತ್ತಿದ್ದಂತೆ ಕಾಣುತ್ತದೆ. ಅಚ್ಯುತನ್ ನಂಬಿಯಾರರ ಡ್ರಗ್ಸ್ ವ್ಯಾಪಾರಕ್ಕೆ ಸುಧೀಂದ್ರ ನಯ್ಯಾರ್ ತುಂಬಾನೇ ಸಹಾಯ ಮಾಡಿದ್ದರಂತೆ. ಎಷ್ಟೋ ಸಾರಿ ತನ್ನ ಸ್ಟಾಕನ್ನು ಅಚ್ಯುತನ್ ನಂಬಿಯಾರ್ ತಿಂಗಳುಗಟ್ಟಲೆ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜಿನ ಸ್ಟೋರ್ ರೂಮುಗಳಲ್ಲಿ ಇಟ್ಟಿದ್ದರಂತೆ. ಸುಧೀಂದ್ರ ನಯ್ಯಾರ್, ಅಚ್ಯುತನ್ ನಂಬಿಯಾರ್‌ಗೆ ಸಪೋರ್ಟ್ ಮಾಡಲು ಕಾರಣವೂ ಇತ್ತು. ತುಂಬಾ ನೋವಿನಿಂದ ನರಳುತ್ತಿದ್ದ ಸ್ಕೂಲಿನ ಇನ್‌ಮೇಟ್ಸ್‌ಗಳಿಗೆ ಡ್ರಗ್ಸ್ ನೀಡಿ ನೋವನ್ನು ಉಪಶಮನ ಮಾಡಲಾಗುತ್ತಿತ್ತಂತೆ. ಏಕೆಂದರೆ, ಕೆಲವರಿಗೆ ಎಷ್ಟೇ ಮೆಡಿಕಲ್ ಟ್ರೀಟ್‌ಮೆಂಟ್ ಕೊಟ್ಟರೂ ನೋವು ನಿವಾರಣೆಯಾಗುತ್ತಿರಲಿಲ್ಲವಂತೆ. ಸ್ವತಃ ಸುಧೀಂದ್ರ ನಯ್ಯಾರ್ ಎಷ್ಟೋ ವರ್ಷಗಳ ಕಾಲ ಡ್ರಗ್ಸ್ ತೆಗೆದುಕೊಳ್ಳುತ್ತಿದ್ದರಂತೆ. ಈ ವಿಷಯ ಗೊತ್ತಾಗಿ ಸಿಂಧೂ ಮೆನನ್ ತುಂಬಾ ಪ್ರತಿರೋಧ ವ್ಯಕ್ತಪಡಿಸಿದ್ದಳಂತೆ. ಅಚ್ಯುತನ್ ನಂಬಿಯಾರ್ ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ಬೇರೆ ಯಾರ ಬಳಿಯೋ ಪೊಲೀಸ್ ಕ್ರೈಂ ಬ್ರಾಂಚ್‌ಗೆ ದೂರು ಕೊಡಿಸಿ, ರೈಡ್ ಮಾಡಿಸಿ ತಾನೇ ಮುಂದು ನಿಂತು ಸಮಸ್ಯೆ ಬಗೆಹರಿಸಿದ್ದನಂತೆ. ಕಡೆಗೆ ಸಿಂಧೂ ಮೆನನ್ ಕೂಡಾ ಬೇಕಾದಷ್ಟು ಸಾರಿ ಎಲ್‌ಎಸ್ಡಿ ಟ್ರಿಪ್ ಮಾಡಿದ್ದಾಳಂತೆ. ದೇಹದ ನೋವು ನಿವಾರಣೆ ಮಾಡುವ ವಸ್ತು ನಿಜಕ್ಕೂ ನಾವು ಪ್ರೀತಿ ಮತ್ತು ಗೌರವದಿಂದ ನೋಡಬೇಕು'. ರಾಘವರೆಡ್ಡಿ ಮಾತನಾಡುತ್ತಿರುವಾಗಲೇ ನನ್ನ ಫೋನ್ ರಿಂಗಾಗಿತ್ತು. ಟ್ರೂಕಾಲರ್‌ನಲ್ಲಿ ಮನೋಹರ್ ಕುಂಜು ಎಂದು ತೋರಿಸುತ್ತಿತ್ತು.

'ಹಲೋ, ಹೇಳಿ ಮನೋಹರ್ ಕುಂಜು' ಎಂದು ವಿಚಾರಿಸಿಕೊಂಡಿದ್ದೆ. 'ಮನೋಹರ್ ಕುಂಜು ಅಲ್ಲ ಸಾಹೇಬ್ರೆ, ನಾನು ಭಗವಾನ್ ಕುಟ್ಟಿ ಮಾತನಾಡ್ತಿರೋದು. ನೀವು ಇನ್ನೆರಡು ದಿನ ಇಲ್ಲಿ ಇರಬೇಕಿತ್ತು. ನಾನಂತೂ ನಿಮ್ಮನ್ನು ಪ್ರತಿಕ್ಷಣವೂ ನೆನೆಯುತ್ತಿರುತ್ತೇನೆ. ನೀವು ಇಲ್ಲಿಗೆ ಬಾರದೇ ಹೋಗಿದ್ದಲ್ಲಿ ಈ ಕ್ಷಣ ನಾನು ಭೂಮಿಯ ಮೇಲೆ ಬದುಕಿಯೇ ಇರುತ್ತಿರಲಿಲ್ಲ. ಮಳೆ ಮತ್ತು ಪ್ರವಾಹದಿಂದ ಕೆ.ಎಮ್. ನಯ್ಯಾರ್‌ಗೆ ಒಳ್ಳೆಯದೇ ಆಗುತ್ತಿದೆ ಅನ್ನಿಸುತ್ತಿದೆ. ಪ್ರವಾಹದಿಂದ ಕಿತ್ತುಹೋಗಿರುವ ರಸ್ತೆ ಮತ್ತಿತರ ರಿಪೇರಿ ಕಾಮಗಾರಿಗಳನ್ನು ನಯ್ಯಾರರಿಗೆ ವಹಿಸಲು ಕೇಂದ್ರ ಸಚಿವರು ಮುಖ್ಯಮಂತ್ರಿಗಳಿಗೆ ತಾಕೀತು ಮಾಡಿದ್ದಾರೆ. ಮತ್ತು ರಾಜಕೀಯ ಪ್ರವೇಶಿಸಲು ಒತ್ತಾಯ ಕೂಡಾ ಹಾಕುತ್ತಿದ್ದಾರೆ. ನಯ್ಯಾರ್ ದೆಹಲಿಗೆ ಬಹುಶಃ ನಾಡಿದ್ದು ರಾತ್ರಿಗೆ ಬರುತ್ತಾರೆ. ನಿಮ್ಮನ್ನು ಬಹಳವಾಗಿ ನೆನಪಿಸಿಕೊಳ್ಳುತ್ತಿದ್ದಾರೆ. ದೆಹಲಿಗೆ ಬಂದಾಗ ನಿಮ್ಮ ಅಣ್ಣನ್ನ ತಪ್ಪದೆ ಭೇಟಿ ಮಾಡಿಸಿ. ಮಾಧವನ್ ಪಿಳ್ಳೈ ಮತ್ತು ಅರುಂಧತಿ ಪಿಳ್ಳೈರನ್ನು ಕಳೆದುಕೊಂಡದ್ದಂತೂ ಕೆ.ಎಮ್. ನಯ್ಯಾರ್ ಮತ್ತು ಸುಧೀಂದ್ರ ನಯ್ಯಾರ್ ಇಬ್ಬರಿಗೂ ಭರಿಸಲಾರದ ನಷ್ಟವೆಂಬುದು ನನಗೆ ಗೊತ್ತು. ಆದರೆ ವಿಧಿಯ ಮುಂದೆ ಮನುಷ್ಯನದು ಏನೇನೂ ನಡೆಯಲಾರದೆಂಬುದೂ ಅಷ್ಟೇ ಸತ್ಯ. ಬಿಡುವು ಮಾಡಿಕೊಂಡು ಮತ್ತೊಮ್ಮೆ ಕೇರಳಕ್ಕೆ ಬನ್ನಿ. ಒಟ್ಟಿಗೆ ಶಬರಿಮಲೈ ಸ್ವಾಮಿಯ ದರ್ಶನ ಮಾಡೋಣ. ಹಾಗೆಯೇ ಅಷ್ಟಮುಡಿ ಬ್ಯಾಕ್ ವಾಟರ್‌ಗೆ ಕರೆದುಕೊಂಡು ಹೋಗಿ ಅಪರೂಪದ ಸ್ವರ್ಗ ತೋರಿಸ್ತೀನಿ. ಕೋರನ್ ಅಂತ ನನ್ನ ಕ್ಲೋಸ್ ಫ್ರೆಂಡ್, ಬ್ಯಾಕ್ ವಾಟರ್‌ನಲ್ಲಿ ಮೊಬೈಲ್ ಹೋಟೆಲ್‌ಗಳನ್ನು ನಡೆಸುತ್ತಿದ್ದಾನೆ. ಹೋಟೆಲ್‌ಗಳ ಫುಲ್ ಮ್ಯಾನೇಜ್ಮೆಂಟ್ ನಮ್ಮ ಕೇರಳದ ಹುಡುಗಿಯರೇ. ಸಾಧ್ಯವಾದರೆ ನಯ್ಯಾರಿಂದ ರಾತ್ರಿಗೆ ಫೋನ್ ಮಾಡಿಸ್ತೀನಿ. ಗುಡ್ ಡೇ ಸಾಹೇಬ್ರೆ' ಎಂದು ಫೋನ್ ಇಟ್ಟಿದ್ದ ಭಗವಾನ್ ಕುಟ್ಟಿ. ಭಗವಾನ್ ಕುಟ್ಟಿಯದು ಖಂಡಿತವಾಗಿ ಮರೆಯಲಾಗದ ಒಂದು ವಿಶಿಷ್ಟ ಕ್ಯಾರೆಕ್ಟರ್.

'ಯಾರದು ಭಗವಾನ್ ಕುಟ್ಟೀನಾ?' ವಾಸನೆ ಹಿಡಿದು ಕೇಳಿದ್ದ ರಾಘವರೆಡ್ಡಿಗೆ ಹೌದೆಂದಿದ್ದೆ. 'ಒಂದು ಸಿ ಎಂ ಪೋಸ್ಟನ್ನು ಬೇಕಾದ್ರೂ ಯಾವುದೇ ತೊಂದರೆ ಇಲ್ಲದೆ ನಡೆಸ್ತಾನೆ ಆಸಾಮಿ. ಮತ್ತು ಸ್ವಾಮಿ ನಿಷ್ಠೆ ಅನ್ನೋದು ಹಂಡ್ರೆಡ್ ಪರ್ಸೆಂಟ್ ಭಗವಾನ್ ಕುಟ್ಟಿಯಲ್ಲಿ ಕಾಣಬಹುದು. ಆತನಿಗೆ ಯಾವ ಡೆಸ್ಟಿನೇಷನ್ನೂ ಇಲ್ಲ. ಹಾಗಾಗಿ ಸದಾ ನೆಮ್ಮದಿಯಲ್ಲಿ ಬದ್ಕಿರ್ತಾನೆ. ನಿಜಕ್ಕೂ ಯಾರಿಗೆ ಡೆಸ್ಟಿನೇಷನ್ ಬಗ್ಗೆ ಗೀಳಿರುವುದಿಲ್ಲವೋ ಅಂಥವರೆಲ್ಲಾ ಜಗತ್ತಿನಲ್ಲಿ ನೆಮ್ಮದಿಯಾಗಿಯೇ ಇರುತ್ತಾರೆ. ಆದರೆ ಅಂಥ ಜನ ತುಂಬಾ ವಿರಳ ಪ್ರಪಂಚದಲ್ಲಿ. ಅದಿರಲಿ, ನಾಳೆ ನಿಮ್ಮ ಅಣ್ಣನನ್ನು ಭೇಟಿಯಾಗೋಣವೆ? ನನ್ನನ್ನು ಒಮ್ಮೆ ನಿಮ್ಮಣ್ಣನಿಗೆ ಪರಿಚಯ ಮಾಡಿಸಿಕೊಡು, ಯಾವಾಗಲಾದರೂ ದಿಲ್ಲಿಗೆ ಬಂದಾಗ ಮೀಟ್ ಆಗ್ತೀನಿ' ಎಂದ ರಾಘವರೆಡ್ಡಿಗೆ, 'ಅಣ್ಣ ಇನ್ನು ಮೂರು ದಿನ ದಿಲ್ಲಿಯಲ್ಲಿ ಸಿಗುವುದಿಲ್ಲ. ಇಲಾಖೆಯ ಕೆಲಸದ ನಿಮಿತ್ತ ದಿಲ್ಲಿಯ ಹೊರಗಡೆ ಇದ್ದಾರಂತೆ' ಎಂದಿದ್ದೆ.

'ಎಲ್ಲಿದ್ದಾರಂತೆ?' ಬಡಪೆಟ್ಟಿಗೆ ರಾಘವರೆಡ್ಡಿ ಯಾವುದನ್ನೂ ಬಿಡುವುದಿಲ್ಲ. 'ಇಲಾಖೆಯ ನಾರ್ಮ್ಸ್ ಪ್ರಕಾರ ಅದೆಲ್ಲವನ್ನು ಹೇಳಲು ಬರುವುದಿಲ್ಲ. ಹಾಗಾಗಿ ನಾನೂ ಒತ್ತಾಯಿಸಲಿಲ್ಲ'. ನಾನು ಬೇಕೆಂದೇ ರಾಘವರೆಡ್ಡಿಗೆ ಸುಳ್ಳು ಹೇಳಿದ್ದೆ. 'ಎಂಥ ಸಂಬಂಧ ಬ್ರದರ್ ನಿಮ್ದು, ನಮ್ಮ ಅಣ್ಣ ಸತ್ಯನಾರಾಯಣಡು ಎಂಥ ಪರ್ಸನಲ್ ವಿಷಯವನ್ನಾದರೂ ನನ್ನ ಹತ್ತಿರ ಹಂಚ್ಕೊತಾನೆ. ಏಕೆಂದರೆ, ಮುಂದೆ ಎಂದಾದರೂ ತೊಂದರೆ ಬಂದರೆ ಇಮ್ಮಿಡಿಯಟ್ಟಾಗಿ ಹೆಗಲು ಕೊಡೋರೇ ಒಡಹುಟ್ಟಿದವರಲ್ಲವೆ? ಅಷ್ಟಿಲ್ಲದೆ ಬ್ಲಡ್ ಈಸ್ ಥಿಕ್ಕರ್ ದೆನ್ ವಾಟರ್ ಅಂತ ಗಾದೆ ಹುಟ್ಟಿಕೊಳ್ತಾ', ರಾಘವರೆಡ್ಡಿ ಮಾತಿನಮಲ್ಲ. 'ನಾನು ನನ್ನ ತಂದೆಯ ಎರಡನೆಯ ಹೆಂಡತಿಯ ಮಗ. ಇನ್ನಿಬ್ಬರು ಅಣ್ಣಂದಿರು ಮೊದಲನೇ ಹೆಂಡತಿಯ ಮಕ್ಕಳು' ಎಂದು ನಾನು ಥಟ್ಟನೆ ಹೇಳಿದ್ದೆ. 'ಓಹ್, ಗೊತ್ತಿರಲಿಲ್ಲ ನೋಡು, ಆದರೂ ಬ್ಲಡ್ ಒಂದೇ ಅಲ್ವಾ ಬ್ರದರ್' ರಾಘವರೆಡ್ಡಿಯೂ ಥಟ್ಟನೆ ಹೇಳಿದ್ದ.

'ಹೌದು, ರಕ್ತ ಒಂದೇ ಆದರೂ ಕರುಳುಗಳು ಬೇರೆ. ಮೊದಲ ಹೆಂಡತಿ ಸತ್ತ ಮೇಲೆ ಅಪ್ಪ ನನ್ನ ಅಮ್ಮನನ್ನು ಮದುವೆಯಾಗಿದ್ದರು. ಬೆಳೆದು ನಿಂತಿದ್ದ ಅಣ್ಣಂದಿರಿಬ್ಬರಿಗೂ ಅಪ್ಪ ಇನ್ನೊಂದು